# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ನ್ಯಾಯಾಲಯ, ಕೆ.ಜಿ.ಎಫ್.

**ಸಿ.ಸಿ ನಂ:- 579/2014**

**ಚಾಸಾ: 1**

**ಪ್ರಾಸಾ: 1**

**ದಿನಾಂಕಃ 04-04-2018 ರಂದು**

**ಪ್ರತಿಜ್ಞಾವಿಧಿ ಭೋಧಿಸಲಾಯಿತು**

| | |
|---|---|
| **ಸಾಕ್ಷಿದಾರನ ಹೆಸರುಃ-** | **ಅಭಿದ್ ಹುಸೇನ್** |
| **ತಂದೆ/ಗಂಡನ ಹೆಸರುಃ-** | **ಇಕ್ಬಾಲ್ ಹುಸೇನ್** |
| **ವಯಸ್ಸುಃ-** | **41 ವರ್ಷ** |
| **ಉದ್ಯೋಗಃ-** | **ನಿರೀಕ್ಷಕರು, ಸಹಕಾರಿ ಇಲಾಖೆ, ರಾಮನಗರ** |
| **ವಾಸಃ-** | **ರಾಮನಗರ** |

**ಮುಖ್ಯ ವಿಚಾರಣೆಃ- ಸ.ಅ.ನಿ ರವರಿಂದ ಃ**

ನಾನು ದಿಃ 30-11-2009ರಿಂದ ದಿಃ 6-1-2018ರವರೆಗೆ ಸಹಕಾರಿ ಸಂಘಗಳ ನಿರೀಕ್ಷಕನಾಗಿ ಕೋಲಾರ ಉಪ-ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ. ಚಾಸಾ-2, 3, 7 ಮತ್ತು 8ರವರುಗಳ ಪರಿಚಯವಿದೆ. 2010ನೇ ಸಾಲಿನಲ್ಲಿ ಚಾಸಾ-2ರವರಿಗೆ ಸಹಕಾರಿ ಸಂಘಗಳ ಸಹಾಯಕ ನಿಭಂದಕರು ಕೆಜಿಎಫ್‌ನ ಕರುಮಾರಿಯಮ್ಮ ಮಹಿಳಾ ವಿವಿದೋದ್ದೇಶ ಸಂಘ ನಿಯಮಿತದಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ತನಿಖೆ ಮಾಡಿ ವರದಿ ನೀಡುವಂತೆ ಆದೇಶಿಸಿದ್ದು, ಅದರಂತೆ ಚಾಸಾ-2ರವರು ಸದರಿ ಸಹಕಾರ ಸಂಘದ ವ್ಯವಹಾರಗಳ ಬಗ್ಗೆ ತನಿಖೆ ಮಾಡಿ ಸೆಪ್ಟೆಂಬರ್-2010ರಲ್ಲಿ ವರದಿ ನೀಡಿದರು. 2007-2008ನೇ ಸಾಲಿನಲ್ಲಿ ಸರ್ಕಾರದಿಂದ ಸದರಿ ಸಂಘಕ್ಕೆ ಅಲ್ಪಸಂಖ್ಯಾತ ವ್ಯಕ್ತಿಗಳನ್ನು ಉಚಿತವಾಗಿ ಸದಸ್ಯರುಗಳನ್ನಾಗಿ ಪಡೆದುಕೊಳ್ಳಲು 50 ಸಾವಿರ ರೂಪಾಯಿ ಮಂಜೂರಾಗಿತ್ತು. ನಂತರ 2007-08ನೇ ಸಾಲಿನಲ್ಲಿ 2 ಮತ್ತು 3ನೇ ಆರೋಪಿ ವಸಂತರವರುಗಳು ಸದರಿ ಸಂಘದ ಅಧ್ಯಕ್ಷೆ ಮತ್ತು ಕಾರ್ಯದರ್ಶಿ ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಕೆಜಿಎಫ್‌ನ ಕೆನರಾ ಬ್ಯಾಂಕಿನಲ್ಲಿ ಖಾತೆ ತೆರೆದಿದ್ದರು. ಸದರಿ ಬ್ಯಾಂಕ್ ಖಾತೆಗೆ 2 ಮತ್ತು 3ನೇ ಆರೋಪಿತರು ಸರ್ಕಾರದಿಂದ ಮಂಜೂರಾದ 50 ಸಾವಿರ ಹಣವನ್ನು ನಗದೀಕರಿಸಿಕೊಂಡು ಸದರಿ 50 ಸಾವಿರ ಹಣವನ್ನು ಸದರಿ ಖಾತೆಯಿಂದ

ಹಿಂಪಡೆದುಕೊಂಡಿದ್ದರು. ಸದರಿ ಅವಧಿಯಲ್ಲಿ ಕರುಮಾರಿಯಮ್ಮ ಮಹಿಳಾ ವಿವಿದೋದ್ದೇಶ ಸಹಕಾರಿ ಸಂಘದಲ್ಲಿ ಚಾಸಾ-9 ಮತ್ತು 10ರವರುಗಳು ಅಧ್ಯಕ್ಷೆ ಮತ್ತು ಕಾರ್ಯದರ್ಶಿ ಆಗಿದ್ದರು. ಸದರಿ ಅವಧಿಯಲ್ಲಿ 4ನೇ ಆರೋಪಿ ಭಾಸ್ಕರನ್‌ರವರು ಕೆನರಾ ಬ್ಯಾಂಕಿನ ವ್ಯವಸ್ಥಾಪಕರಾಗಿದ್ದರು.

2009-10ನೇ ಸಾಲಿನಲ್ಲಿ ಸರ್ಕಾರದಿಂದ ಸದರಿ ಸಂಘಕ್ಕೆ ಪರಿಶಿಷ್ಟ ಜಾತಿಯ ವ್ಯಕ್ತಿಗಳನ್ನು ಉಚಿತವಾಗಿ ಸದಸ್ಯರುಗಳನ್ನಾಗಿ ಮಾಡಿಕೊಳ್ಳಲು 82 ಸಾವಿರ ಹಣ ಮಂಜೂರಾಗಿತ್ತು, ಸದರಿ 82 ಸಾವಿರ ಹಣವನ್ನು 2 ಮತ್ತು 3ನೇ ಆರೋಪಿತರು ಬಂಗಾರಪೇಟೆಯ ಡಿಸಿಸಿ ಬ್ಯಾಂಕಿನಲ್ಲಿ ತೆರೆದಿದ್ದ ಖಾತೆಗೆ ಜಮಾ ಮಾಡಿಕೊಂಡು ಸದರಿ 82 ಸಾವಿರಗಳನ್ನು ಹಿಂಪಡೆದುಕೊಂಡಿದ್ದರು.

ನಂತರ 2009-10ನೇ ಸಾಲಿನಲ್ಲಿ 2 ಮತ್ತು 3ನೇ ಆರೋಪಿತರು ಸದರಿ ಸಂಘದ ಅಧ್ಯಕ್ಷೆ ಮತ್ತು ಕಾರ್ಯದರ್ಶಿ ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಬಂಗಾರಪೇಟೆಯ ಡಿಸಿಸಿ ಬ್ಯಾಂಕಿನಲ್ಲಿ ಖಾತೆ ತೆರೆದಿದ್ದರು. ಸದರಿ ಬ್ಯಾಂಕ್ ಖಾತೆಗೆ 2 ಮತ್ತು 3ನೇ ಆರೋಪಿತರು ಸರ್ಕಾರದಿಂದ ಪರಿಶಿಷ್ಟ ಜಾತಿಯ ವ್ಯಕ್ತಿಗಳನ್ನು ಉಚಿತವಾಗಿ ಸದರಿ ಸಂಘದ ಸದಸ್ಯರುಗಳನ್ನಾಗಿ ಮಾಡಿಕೊಳ್ಳಲು ಮಂಜೂರಾದ 82 ಸಾವಿರ ಹಣವನ್ನು ನಗದೀಕರಿಸಿಕೊಂಡು ಸದರಿ 82 ಸಾವಿರ ಹಣವನ್ನು ತಮ್ಮ ಬ್ಯಾಂಕ್ ಖಾತೆಯಿಂದ ಹಿಂಪಡೆದುಕೊಂಡಿದ್ದರು. ಸದರಿ ಅವಧಿಯಲ್ಲಿ ಕರುಮಾರಿಯಮ್ಮ ಮಹಿಳಾ ವಿವಿದೋದ್ದೇಶ ಸಹಕಾರಿ ಸಂಘದಲ್ಲಿ ಚಾಸಾ-9ರವರು ಕಾರ್ಯದರ್ಶಿಯಾಗಿದ್ದು ಅಧ್ಯಕ್ಷರ ಹೆಸರು ನೆನಸಿಲ್ಲ, ಸದರಿ ಅವಧಿಯಲ್ಲಿ 5ನೇ ಆರೋಪಿ ರಘುನಾಥರೆಡ್ಡಿರವರು ಡಿಸಿಸಿ ಬ್ಯಾಂಕಿನ ವ್ಯವಸ್ಥಾಪಕರಾಗಿದ್ದರು. 2 ಮತ್ತು 3ನೇ ಆರೋಪಿತರು ಕೆಜಿಎಫ್‌ನ ಕೆನರಾ ಬ್ಯಾಂಕಿನಲ್ಲಿ ಹಾಗೂ ಬಂಗಾರಪೇಟೆಯ ಡಿಸಿಸಿ ಬ್ಯಾಂಕಿನಲ್ಲಿ ಖಾತೆಗಳನ್ನು ತೆರೆಯಲು 1ನೇ ಆರೋಪಿ 2 ಮತ್ತು 3ನೇ ಆರೋಪಿತರನ್ನು ಬ್ಯಾಂಕಿನ ವ್ಯವಸ್ಥಾಪಕರಿಗೆ ಪರಿಚಯಿಸಿ ಸಹಿ ಮಾಡಿದ್ದರು. ಸದರಿ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಆರೋಪಿತರ ವಿರುದ್ಧ ದೂರು ನೀಡುವಂತೆ ಸಹಕಾರಿ ಸಂಘಗಳ ಸಹಾಯಕ ನಿಭಂದಕರು, ಕೋಲಾರ ಉಪ-ವಿಭಾಗರವರು ನನಗೆ ಆದೇಶಿಸಿದ್ದು, ಅದರಂತೆ ನಾನು ಆರೋಪಿತರ ವಿರುದ್ಧ ರಾ.ಪೇಟೆ ಪೊಲೀಸ್ ಠಾಣೆಯಲ್ಲಿ ದಿಃ 5-1-2011ರಂದು ದೂರು ನೀಡಿದ್ದೇನೆ. ಸದರಿ

ದೂರನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ಪಂಚನಾಮೆಯಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಸದರಿ ಪಂಚನಾಮೆಯನ್ನು ನಿಪಿ-2 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಪೊಲೀಸರು ಕೋಲಾರದ ನಮ್ಮ ಕಚೇರಿಯಲ್ಲಿ ದಿಃ 11-1-2011ರಂದು ತಯಾರಿಸಿದ್ದಾರೆ. ನಿಪಿ-2ಕ್ಕೆ ನನ್ನೊಂದಿಗೆ ಚಾಸಾ-7 ಮತ್ತು 8ರವರುಗಳು ಸಹಿ ಮಾಡಿದ್ದಾರೆ. ಕರುಮಾರಿಯಮ್ಮ ಮಹಿಳಾ ವಿವಿದೊದ್ದೇಶ ಸಹಕಾರಿ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯನ್ನು ನನ್ನ ಸಮಕ್ಷಮ ಪೊಲೀಸರು ವಿಚಾರಣೆ ಮಾಡಿಲ್ಲ. ಚಾಸಾ-2ರವರು ಸದರಿ ಕರುಮಾರಿಯಮ್ಮ ಮಹಿಳಾ ವಿವಿದೊದ್ದೇಶ ಸಹಕಾರ ಸಂಘದ ವ್ಯವಹಾರಗಳ ಬಗ್ಗೆ ತನಿಖೆ ಮಾಡಿ ನೀಡಿದ ಪರಿವೀಕ್ಷಣಾ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸ.ಅ.ನಿ.ರವರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**(ದಯಾನಂದ ವಿ.ಹೆಚ್)**
**ಹಿರಿಯ ಸಿ.ಜೆ ಮತ್ತು ಪ್ರಧಾನ ಜೆಎಂಎಫ್‌ಸಿ,**
**ಕೆ.ಜಿ.ಎಫ್**